2 ನೇ ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.

**ಸಿ.ಸಿ.1124/2017**

ಪಿರ್ಯಾದುದಾರರುಃ- ಮೆಃವಿಸ್ತಾರ್ ಫೈನಾನ್ಸಿಯಲ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್,
ನಂಬರ್.9, 3 ನೇ ತಿರುವು, 37 ನೇ ಮೈನ್, ಕೆಎಎಸ್ ಅಧಿಕಾರಿಗಳ
ಕಾಲೋನಿ, ಬಿಟಿಎಂ 2 ನೇ ಸ್ಟೇಜ್, ಬೆಂಗಳೂರು, ಪ್ರತಿನಿಧಿಸುವವರುಃ
ಜಿಪಿಎ ಹೋಲ್ಡರ್ ಶ್ರೀ ಸುನೀಲ್ ಜಿ.ಸಿ. ಬಿನ್ ಗುರುಪಾದಯ್ಯ,
ವಾಸಃಬೆಂಗಳೂರು.

-ವಿರುದ್ಧ-

ಅರೋಪಿತ/ರು ಃ- ಗಂಗಾಧರಸ್ವಾಮಿ ಬಿ.ಎಂ. ಬಿನ್ ಮರುಳಸಿದ್ದಯ್ಯ, ಮೇಜರ್,
ವಾಸಃನಂ.63 ಕಡೂರಳ್ಳಿ ಗ್ರಾಮ ಮತ್ತು ಅಂಚೆ, ಕಸಬಾ ಹೋಬಳಿ,
ಕಡೂರು ತಾಲ್ಲೂಕು.

**ಃಆರೋಪಣೆಃ**

ಆರೋಪಿಯಾದ ನೀವು ಪಿರ್ಯಾದಿಯಿಂದ ನಿಮ್ಮ ಗೃಹಕೃತ್ಯದ ಆಡಚಣೆಗಾಗಿ ಹಾಗೂ ತುರ್ತು ಅವಶ್ಯಕತೆಯ ಸಲುವಾಗಿ ರೂ.2,30,000/-ಗಳನ್ನು ಸಾಲವಾಗಿ ಪಡೆದಿದ್ದು ಅದಕ್ಕೆ ತಾವು ಫೆಡರಲ್ ಬ್ಯಾಂಕ್ ಲಿಮಿಟೆಡ್, ಕಡೂರು ಶಾಖೆಗೆ ಸಂಬಂಧಿಸಿದ ಚೆಕ್.ನಂ.**016803**, ದಿನಾಂಕಃ**12-04-2016** ನ್ನು ನೀವು ಫೆಡರಲ್ ಬ್ಯಾಂಕ್ ಲಿಮಿಟೆಡ್, ಕಡೂರು ಶಾಖೆಯಲ್ಲಿ ಹಣ ಪಡೆಯಲು ಚೆಕ್ಕನ್ನು ಬ್ಯಾಂಕಿನಲ್ಲಿ ಹಾಜರು ಮಾಡಿದಾಗ **'ಸಾಕಷ್ಟು ಹಣವಿಲ್ಲ'** ಎಂಬ ಹಿಂಬರಹದೊಂದಿಗೆ ವಾಪಾಸ್ ನೀಡಿದ್ದು, ಆಗ ನಿಮಗೆ ಹಣ ಕೇಳಿ ವಕೀಲರ ಮೂಲಕ ನೋಟೀಸನ್ನು ನೀಡಿದ್ದು, ನೀವು ಸದರಿ ಹಣವನ್ನು ನೋಟೀಸು ತಲುಪಿದ 15 ದಿನಗಳ ಒಳಗಾಗಿ ಪಾವತಿ ಮಾಡುವಂತೆ ನೋಟೀಸಿನಲ್ಲಿ ತಿಳಿಸಲಾಗಿತ್ತು. ಸದರಿ ನೋಟೀಸು ನಿಮಗೆ ಜಾರಿ ಆಗಿದ್ದರೂ ಸಹ ನೀವು ಇದೂವರೆಗೂ ಹಣ ಪಾವತಿ ಮಾಡದೇ ಇರುವುದರಿಂದ ನಿಮ್ಮ ವಿರುದ್ಧ ಪಿರ್ಯಾದು ಸಲ್ಲಿಸಿದ್ದು ನೀವು **ಪರಕ್ರಾಮ್ಯ ಪತ್ರಗಳ ಅಧಿನಿಯಮ ಕಲಂ 138 ರಡಿಯಲ್ಲಿ** ಅಪರಾಧ ಮಾಡಿದ್ದೀರಿ ಅಂತ ಆರೋಪಣೆ ಇದೆ.

ಪ್ರಃ**1)** ಮೇಲ್ಕಂಡ ಆರೋಪಣೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ**?**

ಉತ್ತರಃ **Yes**

ಪ್ರಃ**2)**ಮೇಲ್ಕಂಡ ಆರೋಪಣೆಗಳನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೋ**?**

ಉತ್ತರಃ **Pleaded not guilty, claim to be tried.**

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

ಓ ಹೇ ಕೇ ಸ ಇ ಎ ಒ

( ಸಿ.ಎನ್.ಚಂದನ್ )

**2** ನೇ ಹೆಚ್ಚುವರಿ ಪ್ರಃದಃನ್ಯಾಃದಃ**.,**ರವರು ಕಡೂರು**.**